ಆ) ನುರಿತ ತಜ್ಞರು ಇದ್ದರೂ ಸಹ ಕಾರ್ಡಿಯೋ ಥೊರಾಸಿಕ್ ಸರ್ಜರಿ ವಿಭಾಗದಲ್ಲಿ ಪ್ರತ್ಯೇಕವಾಗಿ ವಾರ್ಡನ್ನು ನೀಡದಿರುವುದಕ್ಕೆ ಕಾರಣವೇನು?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಸಚಿವರು).—

ಆ) ಹೌದು.

ಆ) ಉದ್ಭವಿಸುವುದಿಲ್ಲ.

ಎಂಡೋಸ್ಕೊಪ್ ಮತ್ತು ಅಲ್ಟ್ರಸೌಂಡ್ ಉಪಕರಣಗಳು ಬಳ್ಳಾರಿ ವೈದ್ಯಕೀಯ ಆಸ್ಪತ್ರೆಯಲ್ಲಿ ನಿರುಪಯೋಗವಾಗಿರುವುದು

೨೭೮ ಶ್ರೀ ರಾಮಪ್ಪ (ಬಳ್ಳಾರಿ).—ಮಾನ್ಯ ಆರೋಗ್ಯ, ಕುಟುಂಬ ಕಲ್ಯಾಣ ಮತ್ತು ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಎಂಡೋಸ್ಕೊಪಿ ಮತ್ತು ಅಲ್ಟ್ರಸೌಂಡ್ ಉಪಕರಣಗಳು ಬಳ್ಳಾರಿ ವೈದ್ಯಕೀಯ ಆಸ್ಪತ್ರೆಯಲ್ಲಿ ನಿರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ?

ಆ) ಅವುಗಳ ಉಪಯೋಗವನ್ನು ಪಡೆಯದೆ ಇರುವುದಕ್ಕೆ ಕಾರಣಗಳೇನು?

ಇ) ಈ ಉಪಕರಣಗಳು ಹಾಗೂ ತರಬೇತಿ ಪಡೆದ ವೈದ್ಯರಿದ್ದರೂ ಸಹ ರೋಗಿಗಳು ತಪಾಸಣೆಗಾಗಿ ಹೊರಗಡೆ ಹೋಗುತ್ತಿರುವುದು ಸರಿಯೆಷ್ಟು?

ಈ) ಅದಕ್ಕಾಗಿ ಸರ್ಕಾರವು ಸಂಬಂಧಪಟ್ಟ ಅಧಿಕಾರಿಗಳಿಗೆ ಏನು ಸೂಚನೆ ನೀಡಿದೆ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ, ಕುಟುಂಬ ಕಲ್ಯಾಣ ಮತ್ತು ಸಹಕಾರ ಮಂತ್ರಿಗಳು).—

ಅ) ಹೌದು.

ಆ) ಯಂತ್ರಗಳನ್ನು ಬುನಾದಿಗೊಳಿಸಲು ಬೇಕಾಗುವ ಪೂರಕ ಕೆಲಸಗಳನ್ನು ಅಂದರೆ ಶೀತಗಾರ ಯಂತ್ರವನ್ನು ಅಳವಡಿಸಲು ಕಾವುಗಾರಿ ಕೆಲಸವನ್ನು ಲೋಕೋಪಯೋಗಿ ಇಲಾಖೆಗೆ ನಿರ್ವಹಿಸಿರುತ್ತದೆ. ಆ ಕೆಲಸವು ಮುಗಿಯುತ್ತಾ ಬಂದಿದ್ದು ಮಾರ್ಚ್ ತಿಂಗಳ ಕೊನೆಯಲ್ಲಿ ಯಂತ್ರಗಳನ್ನು ಉಪಯೋಗಿಸಲ್ಪಡುತ್ತದೆ.

ಇ) ಹೌದು.

ಈ) ಇದನ್ನು ಪರಿಶೀಲಿಸಲಾಗುವುದು.

ದಿನಾಂಕ ೨೬-೩-೯೦ರಂದು ಪ್ರಶ್ನೋತ್ತರಗಳ ಅವಧಿಯು ಇಲ್ಲದಿರುವ ಕಾರಣ ಆ ದಿನಾಂಕದ ಚುಕ್ಕೆ ಗುರುತಿನ ೬ನೇ ಪಟ್ಟಿಯಲ್ಲಿರುವ ೨೦ ಪ್ರಶ್ನೆಗಳ ಪೈಕಿ ಸಂಖ್ಯೆ ೯೨, ೩೪೫, ೨೫೦ ಹಾಗೂ ೨೫೨ ಪ್ರಶ್ನೆಗಳನ್ನು ಹೊರತುಪಡಿಸಿ ಉಳಿದ ೧೬ ಪ್ರಶ್ನೆಗಳ ಉತ್ತರಗಳನ್ನು ಹಾಗೂ ಚುಕ್ಕೆ ಗುರುತಿಲ್ಲದ ೬ನೇ ಪಟ್ಟಿಯಲ್ಲಿರುವ ೨೨ ಪ್ರಶ್ನೆಗಳ ಪೈಕಿ ಸಂಖ್ಯೆ ೯೩, ೨೫೩, ೨೭೭, ೨೭೬, ೩೨೯, ೩೧೫, ೩೧೪, ೨೯೩, ೧೭೯ ೪೨ ಹಾಗೂ ೫೧ ಪ್ರಶ್ನೆಗಳನ್ನು ಹೊರತುಪಡಿಸಿ ಉಳಿದ ೨೧ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ದಿನಾಂಕ ೨೬-೩-೧೯೯೦ರ ೬ನೇ ಪಟ್ಟಿಯ ಪ್ರಶ್ನೋತ್ತರಗಳು

ರಾಜ್ಯದಲ್ಲಿ ಹಾಗೂ ಮೈಸೂರು ಜಿಲ್ಲೆಯಲ್ಲಿ ಅರಣ್ಯ ನಾಶ ಆಗುತ್ತಿರುವುದು

೨೭೨ ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ).—ಮಾನ್ಯ ವ್ಯವಸಾಯ, ತೋಟಗಾರಿಕೆ, ಶಿಕ್ಷಣ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಹಾಗೂ ಮೈಸೂರು ಜಿಲ್ಲೆಯಲ್ಲಿ ಅರಣ್ಯ ನಾಶ ಆಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?